ಕರ್ನಾಟಕ ವಿಧಾನ ಸಭೆ

ಬುಧವಾರ, 1ನೇ ಫೆಬ್ರವರಿ ತಿಂಗಳು 1984

ವಿಧಾನ ಸೌಧದ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ 11 ಘಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಡಿ. ಬಿ. **ಚಂದ್ರೇಗೌಡ**) ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು.

ಪ್ರಶ್ನೆ : 172 (551) ಶ್ರೀ ಅಬ್ದುಲ್ ನಜೀರ್‌ಸಾಬ್ .—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಮಾಹಿತಿ ಇನ್ನೂ ಬಂದಿಲ್ಲವಾದ್ದರಿಂದ ಈ ಪ್ರಶ್ನೆಯನ್ನು ತಡೆಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರಶ್ನೆ : 173 (530) (ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಶ್ನೆ : 174 (202) ಶ್ರೀ ಅಬ್ದುಲ್ ನಜೀರ್‌ಸಾಬ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಸರಿಯಾದ ಉತ್ತರ ಬಂದಿಲ್ಲವಾದ್ದರಿಂದ ಇದನ್ನು ಇನ್ನೊಂದು ದಿವಸ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ವಿಷಯ : ಬಾಗಲಕೋಟೆಯಲ್ಲಿ N R. E P. ಯೋಜನೆಯನ್ವಯ ಸಮಾಜವಂದಿರದ ಮಂಜೂರಾತಿ.

ಪ್ರಶ್ನೆ : 175 (180) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ) .—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಸಚಿವರು ಈ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಗುಳೇದಗುಡ್ಡ ಕ್ಷೇತ್ರದ ಬಾಗಲ ಕೋಟೆ ತಾಲ್ಲೂಕಿನ ಬೆನಕಟ್ಟಿ ಗ್ರಾಮಕ್ಕೆ ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಕಾರ್ಯಕ್ರಮದ ಯೋಜನೆಯಿಂದ ಕುರುಬರ ಸಮಾಜ ಮಂದಿರ ಮಂಜೂರು ಆದದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಆದರ ವಿವರಗಳೇನು ?

ಉತ್ತರ: ಶ್ರೀ ಅಬ್ದುಲ್ ನಜೀರ್‌ಸಾಬ್(ಗ್ರಾಮೀಣಾಭಿವೃದ್ಧಿ ಸಚಿವರು). —ಅ) ಹೌದು. ಬಂದಿದೆ.

ಆ) ಕಟ್ಟಡದ ಅಂದಾಜು ವೆಚ್ಚ ರೂ. 37,830-00 ಅಧ್ಯಕ್ಷರು, ಕುರಿ ಸಹಕಾರ ಸಂಘ, ಬೆನಕಟ್ಟಿ ಇವರ ಮುಖಾಂತರ ಕುರುಬರ ಸಮಾಜದ ಜನಗಳು ಬೆನಕಟ್ಟಿ ಗ್ರಾಮ ಇವರಿಂದ ವಸೂಲಾದ ಹಣ ರೂ. 6,500-00. ಇದುವರೆಗೆ ಖರ್ಚು ಮಾಡಿದ ಹಣ ರೂ. 16,941-00. ಈಗ ಈ ಕಟ್ಟಡವನ್ನು ಕಟ್ಟುತ್ತಿದ್ದಾರೆ ಮತ್ತು ಮೇಲ್ಛಾವಣಿವರೆಗೆ ಈ ಕಟ್ಟಡವು ಬಂದಿರುತ್ತದೆ. ಈ ವರ್ಷವೇ ಕಟ್ಟಡವನ್ನು ಪೂರ್ತಿಗೊಳಿಸಲಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ವಿ ಬನ್ನಿ. — ಸ್ವಾಮಿ, ಈ ಕಟ್ಟಡ ಕಳೆದ 3 ವರ್ಷದ ಹಿಂದೆ ಮೇಲ್ಛಾವಣಿ ಹಂತಕ್ಕೆ ಬಂದಿದ್ದುದು ಇವತ್ತಿನವರೆಗೂ ಇದು ಈ ಹಂತದಲ್ಲೇ ಇದೆ. ಇದು ಬಹಳ ನಿಧಾನವಾಗಿರುವುದರಿಂದ ದಯವಿಟ್ಟು ಇದಕ್ಕೆ ಈ ಆಯವ್ಯಯ ವರ್ಷದಲ್ಲೇ ಹೆಚ್ಚು ಹಣವನ್ನೊದಗಿಸಿ ಪೂರ್ತಿಗೊಳಿಸಲು ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಅಬ್ದುಲ್ ನಜೀರ್‌ಸಾಬ್.— ಇದು ಬಹಳ ನಿಧಾನವಾಗಿದೆ ಎಂದು ಗೊತ್ತಿದೆ. ಆದ್ದರಿಂದ ಈ ಪ್ರಸಕ್ತ ಸಾಲಿನಲ್ಲಿ ಇದಕ್ಕೆ ಹೆಚ್ಚಿನ ಹಣವನ್ನೊದಗಿಸಿ ಆದಷ್ಟು ಬೇಗ (ಮಾರ್ಚಿಯೊಳಗೆ) ಮುಗಿಸಿಕೊಡುತ್ತೇವೆ.

ಪ್ರಶ್ನೆ : 573 (424).— (ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಪ್ರಶ್ನೆ : 178 (368) ಶ್ರೀ ಅಬ್ದುಲ್ ನಜೀರ್‌ಸಾಬ್.— ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಸರಿಯಾದ ಉತ್ತರ ಬಂದಿಲ್ಲವಾದ್ದರಿಂದ ಇದನ್ನು ತಡೆಹಿಡಿಯಬೇಕೆಂದು ಕೋರುತ್ತೇನೆ.

ಪ್ರಶ್ನೆ : 129 (225) ಅಧ್ಯಕ್ಷರು.— ಈ ಪ್ರಶ್ನೆಯನ್ನು ಅನಂತರ ತೆಗೆದುಕೊಳ್ಳಲಾಗುತ್ತದೆ.

ವಿಷಯ : ಧಾರವಾಡ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸೌಕರ್ಯ

ಪ್ರಶ್ನೆ : 180 (206) ಶ್ರೀ ಎಂ. ಜಿ. ಜರತಾರ್‌ಗರ್ (ಹುಬ್ಬಳ್ಳಿ).— ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—